# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 16-09-2022

## ಬಸವಕಲ್ಯಾಣ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 132/2022 ಕಲಂ 379 ಐಪಿಸಿ :-

ದಿನಾಂಕ 15-09-2022 ರಂದು 1800 ಗಂಟೆಗೆ ಫಿರ್ಯಾದಿ ಶ್ರೀ ಶ್ರೀಮಂತ ತಂದೆ ವಿಶ್ವನಾಥಪ್ಪಾ ಮಹಾಜನ ವಯ 52 ವರ್ಷ ಜಾತಿ ಲಿಂಗಾಯತ ಉದ್ಯೋಗ ಒಕ್ಕಲುತನ ಸಾ: ಪ್ರತಾಪೂರ ಗ್ರಾಮ ತಾ: ಬಸವಕಲ್ಯಾಣ ಇವರು ಠಾಣೆಗೆ ಹಾಜರಾಗಿ ನೀಡಿರುವ ಲಿಖಿತ ದೂರಿನ ಸಾರಾಂಶವೆನೆಂದರೆ  ಇವರ ಹೊಲವು ಪರತಾಪೂರ ಶಿವಾರದಲ್ಲಿ ಇರುತ್ತದೆ. ಹೊಲ ಸರ್ವೆ ನಂಬರ 48/2 ನೇದ್ದು ಇರುತ್ತದೆ. ಹೋಲದಲ್ಲಿ ಬಾವಿಗೆ 5 ಎಚ್ ಪಿಯ ಎರಟು ನೀರಿನ ಮೋಟಾರಗಳು ಅಳವಡಿಸಿದ್ದು ಇರುತ್ತದೆ. ಒಂದು ಮೋಟಾರಿನ ಅಂದಾಜು ಕಿಮ್ಮತ್ತು 9,000/- ರೂಪಾಯಿ ಇದ್ದು ಎರಡು ಮೋಟಾರನ ಬೆಲೆ 18,000/- ರೂಪಾಯಿ ಇರುತ್ತದೆ. ಹೀಗಿರುವಾಗ  ದಿನಾಂಕ 22-07-2022 ರಂದು ಮುಂಜಾನೆ 7-30 ಎ ಎಮ್ ಗಂಟೆಗೆ ನಾನು ಮನೆಯಲ್ಲಿ ಇದ್ದಾಗ ನನ್ನ ತಮ್ಮ ಸೂರ್ಯಕಾಂತ ಇತನು ಮನೆಗೆ ಬಂದು ನನಗೆ ತಿಳಿಸಿದೇನೆಂದರೆ ನಾನು 7-00 ಗಂಟೆಗೆ ನಮ್ಮ ಹೊಲಕ್ಕೆ ಹೋಗಿ ಬಾವಿ ಹತ್ತಿರ ಹೋದಾಗ ಬಾವಿಯಲ್ಲಿ ಇದ್ದ ಎರಡು ನೀರಿನ ಮೋಟಾರಗಳು ಇರಲಿಲ್ಲಾ. ನಂತರ  ಹುಡುಕಾಡಲು ನೀರಿನ ಮೋಟಾರಗಳು ಇರಲಿಲ್ಲಾ ಅಂತಾ ತಿಳಿಸಿದಾಗ ಫಿರ್ಯಾದಿ ಮತ್ತು  ತಮ್ಮ ಸೂರ್ಯಕಾಂತ ಇಬ್ಬರು ಕೂಡಿಕೊಂಡು ಹೊಲಕ್ಕೆ ಬಾವಿ ಹತ್ತಿರ ಹೋಗಿ ನೋಡಲು ಬಾವಿಯಲ್ಲಿ ಇದ್ದ ಎರಡು ನೀರಿನ ಮೋಟಾರಗಳು ಇರಲಿಲ್ಲಾ.  ದಿನಾಂಕ 21-07-2022 ರಂದು ರಾತ್ರಿ 7-00 ಗಂಟೆಯಿಂದ ದಿನಾಕ 22-07-2022 ರಂದು 7-00 ಎ ಎಮ್ ಗಂಟೆಯ ಮದ್ಯ ಅವಧಿಯಲ್ಲಿ ಯಾರೋ ಕಳ್ಳರು ಹೊಲದಲ್ಲಿನ ಬಾವಿಗೆ ಕುಡಿಸಿದ ಎರಡು ನೀರಿನ ಮೋಟಾರಗಳನ್ನು ಕಳವು ಮಾಡಿಕೊಂಡು ಹೋಗಿರುತ್ತಾರೆ.  ಅಂತಾ ನೀಡಿದ  ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.